PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಇತರ ರಾಜ್ಯಗಳ ವರದಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 28/1/202

# ಪರಿಷತ್ ರದ್ದತಿಗೆ ವಿಧಾನಸಭೆ ಒಪ್ಪಿಗೆ

ಅಮರಾವತಿ: ಆಂಧ್ರಪ್ರದೇಶಕ್ಕೆ ಮೂರು ರಾಜಧಾನಿಗಳನ್ನು ಸ್ಥಾಪಿಸುವ ಯೋಜನೆಗೆ ಅಡ್ಡಗೋಡೆಯಾಗಿರುವ ವಿಧಾನಪರಿಷತ್‌ನ್ನು ವಿಸರ್ಜಿಸುವ ನಿರ್ಣಯವನ್ನು ಆಂಧ್ರ ವಿಧಾನಸಭೆ ಸೋಮವಾರ ಅಂಗೀಕರಿಸಿದೆ. ಬಳಿಕ ವಿಧಾನಸಭೆಯನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ. ಪರಿಷತ್ ವಿಸರ್ಜನೆಯ ಮುಂದಿನ ಪ್ರಕ್ರಿಯೆಗಾಗಿ ಅಂಗೀಕಾರವಾಗಿರುವ ನಿರ್ಣಯವನ್ನು ಸಂಸತ್‌ಗೆ ಕಳುಹಿಸಲಾಗುತ್ತದೆ.



» ಆಂಧ್ರ ಸಿಎಂ ಜಗನ್ ಮಹತ್ವದ ನಿರ್ಧಾರ

ಆಂಧ್ರ ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿ ನೇತೃತ್ವದ ಸಚಿವ ಸಂಪುಟ, ಪರಿಷತ್ ವಿಸರ್ಜಿಸುವ ನಿರ್ಣಯಕ್ಕೆ ಸೋಮವಾರ ಬೆಳಗ್ಗೆ ಒಪ್ಪಿಗೆ ನೀಡಿತ್ತು. ಮೂರು ರಾಜಧಾನಿಗಳಿಗೆ ಸಂಬಂಧಿಸಿದ ಮಸೂದೆ ಹಾಗೂ ಆಂಧ್ರ ಪ್ರದೇಶ ರಾಜಧಾನಿ ವಲಯ ಅಭಿವೃದ್ಧಿ ಪ್ರಾಧಿಕಾರ ಹಿಂಪಡೆಯುವ ಮಸೂದೆಗೆ ವಿಧಾನ ಪರಿಷತ್‌ನಲ್ಲಿ ಬಹುಮತ ಹೊಂದಿರುವ ತೆಲುಗು ದೇಶಂ ಪಾರ್ಟಿ (ಟಿಡಿಪಿ) ತೀವ್ರ ವಿರೋಧ ವ್ಯಕ್ತಪಡಿಸುತ್ತಿರುವುದರಿಂದ ಸಿಎಂ ಜಗನ್, ಪರಿಷತ್ ವಿಸರ್ಜನೆಗೆ ಮುಂದಾಗಿದ್ದಾರೆ. ವಿಧಾನಸಭೆಯಲ್ಲಿ ವೈಎಸ್ ಆರ್ ಕಾಂಗ್ರೆಸ್ ಪಕ್ಷಕ್ಕೆ ಬಹುಮತ ಇರುವುದರಿಂದ ನಿರ್ಣಯಕ್ಕೆ ಸುಲಭವಾಗಿ ಅಂಗೀಕಾರ ಸಿಕ್ಕಿದೆ. ಆದರೆ ಬಿಜೆಪಿ ನಾಯಕರೂ ಕೂಡ ಮೂರು ರಾಜಧಾನಿ ನಿರ್ಧಾರದ ಬಗ್ಗೆ ಅಸಮಾಧಾನ ಹೊಂದಿದ್ದು, ಸಂಸತ್‌ನಲ್ಲಿ ನಿರ್ಣಯ ಅಂಗೀಕಾರವಾಗುತ್ತದೋ ಇಲ್ಲವೋ ಕಾದುನೋಡಬೇಕಾಗಿದೆ.

ವಿಧಾನ ಪರಿಷತ್‌ನಲ್ಲಿ ಟಿಡಿಪಿ ಬಹುಮತ ಹೊಂದಿರುವುದರಿಂದ ಮೂರು ರಾಜಧಾನಿ ಮಸೂದೆ ವಿರೋಧಿಸಿ ಮಂಡಿಸಿದ್ದ ಗೊತ್ತುವಳಿಯು ವಿಧಾನ ಪರಿಷತ್‌ನಲ್ಲಿ ಭಾರಿ ಗದ್ದಲದ ನಡುವೆ ಅಂಗೀಕಾರಗೊಂಡಿತ್ತು. ಹೀಗಾಗಿ ಸಭಾಧ್ಯಕ್ಷರು ಮಸೂದೆಯನ್ನು ಆಯ್ಕೆ ಸಮಿತಿ ವಿವೇಚನಾಧಿಕಾರಕ್ಕೆ ವಹಿಸಿದ್ದಾರೆ. ನಿಯಮದ ಪ್ರಕಾರ ಯಾವುದೇ ಮಸೂದೆಗಳನ್ನು ಆಯ್ಕೆ [illegible] ಕಾಲ ಪರಿಶೀಲನೆ ನಡೆಸಬಹುದಾಗಿದೆ. ಆಂಧ್ರ ಅಭಿವೃದ್ಧಿಗಾಗಿ ಜಗನ್ ಮೂರು ರಾಜಧಾನಿ ನಿರ್ಮಿಸಲು ಚಿಂತಿಸಿದ್ದು, ಒಂದು ರಾಜಧಾನಿ ಆಡಳಿತಕ್ಕೆ, ಒಂದು ರಾಜಧಾನಿ ನ್ಯಾಯಾಂಗಕ್ಕೆ ಹಾಗೂ ಮತ್ತೊಂದು ರಾಜಧಾನಿ ಶಾಸಕಾಂಗಕ್ಕೆ ಕಾರ್ಯ ನಿರ್ವಹಿಸಲಿವೆ. ಕರ್ನೂಲ್‌ನ್ನು ನ್ಯಾಯಿಕ ರಾಜಧಾನಿ, ಅಮರಾವತಿ ಶಾಸಕಾಂಗ ರಾಜಧಾನಿ ಹಾಗೂ ವಿಶಾಖಪಟ್ಟಣಂನ್ನು ಆಡಳಿತಾತ್ಮಕ ರಾಜಧಾನಿಯನ್ನಾಗಿ ಮಾಡುವುದು ಜಗನ್ ಗುರಿಯಾಗಿದೆ.



ಮೇಲ್ಮನೆ ರದ್ದುಪಡಿಸುವ ಅಧಿಕಾರ ರಾಜ್ಯಕ್ಕಿದೆ. ಆದರೆ ಆಂಧ್ರದಲ್ಲಿ ಇದು ಮಕ್ಕಳಾಟವಾಗಿದೆ. ಈ ಹಿಂದೆ ತೆಗೆದು ಹಾಕಿದ್ದರು, ಮತ್ತೆ ಅದನ್ನು ತಂದರು. ಈಗ ಮತ್ತೆ ಮೇಲ್ಮನೆ ತೆಗೆದು ಹಾಕುತ್ತಿದ್ದಾರೆ. ಮೇಲ್ಮನೆ ಇರುವುದು ವಿಧಾನಸಭೆ ಚುನಾವಣೆಯಲ್ಲಿ ಸೀಟು ಸಿಗದವರಿಗೆ ಅವಕಾಶ ನೀಡುವುದಕ್ಕಾಗಿ ಅಲ್ಲ.

| ಮಲ್ಲಿಕಾರ್ಜುನ ಖರ್ಗೆ ಕಾಂಗ್ರೆಸ್ ಹಿರಿಯ ನಾಯಕ